ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಸುತ್ತೋಲೆ/ಸ.ಪ್ರ.ದ.ಕಾ/ಅನುದಾನ(ಬ)/11/2022-23

ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ,
ಬೆಂಗಳೂರು, ದಿನಾಂಕ:21.11.2022.

**ಅತೀ ತುರ್ತು**

## ಸುತ್ತೋಲೆ

**ವಿಷಯ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021-22ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರಾಗಿ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ನವೆಂಬರ್-2022 ಮತ್ತು ಕೊರತೆಯಾಗಿರುವ ಮಾಹೆಗಳಿಗೆ ಅವಶ್ಯಕವಾಗಿರುವ ಗೌರವಧನದ ಮಾಹಿತಿಯನ್ನು ನೀಡುವ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ:ಇಡಿ/242 ಡಿಸಿಇ2021, ದಿನಾಂಕ:14.01.2022 ಮತ್ತು ದಿನಾಂಕ:24.01.2022.

2.ಪತ್ರ ಸಂಖ್ಯೆ: ಕಾಶಿಇ/ನೇವಿ-1/ಅಉಆ/97/2021-22, ದಿನಾಂಕ:17.01.2022, 28.01.2022 & 30.01.2022.

* * * * * * *

ಪ್ರಸ್ತಾಪಿತ ವಿಷಯ ಮತ್ತು ಉಲ್ಲೇಖ(1) & (2)ಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ಇಲಾಖೆಯ ಇ.ಎಂ.ಐ.ಎಸ್ ತಂತ್ರಾಂಶದಲ್ಲಿ ಲಭ್ಯವಿರುವ ಮಾಹಿತಿಯಂತೆ ಹಾಗೂ ಪ್ರಾಂಶುಪಾಲರುಗಳ ಪ್ರಸ್ತಾವನೆಯ ಮೇರೆಗೆ ಅತಿಥಿ ಉಪನ್ಯಾಸಕರುಗಳಿಗೆ ಹಿಂದಿನ ಸಾಲುಗಳ ಕೊರತೆಯಾಗಿರುವ ಮಾಹೆ, ಫೆಬ್ರವರಿ-2022 ರಿಂದ ಅಕ್ಟೋಬರ್-2022ರ ಮಾಹೆವರೆಗೆ ಗೌರವಧನಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಕೆಲವು ಕಾಲೇಜುಗಳ ಪ್ರಾಂಶುಪಾಲರುಗಳು ವೆಚ್ಚ ಮಾಡದೇ ಉಳಿಸಿಕೊಂಡಿರುವುದು ಕಂಡು ಬಂದಿರುತ್ತದೆ. ತಮ್ಮ ಹಂತದಲ್ಲಿ ಬಾಕಿ ಇರುವ ಅನುದಾನವನ್ನು ಕೊರತೆಯಾಗಿರುವ ಮಾಹೆಗಳಿಗೆ ವೆಚ್ಚ ಮಾಡಿ, ಉಳಿಕೆಯಾಗುವ ಅನುದಾನವನ್ನು ನವೆಂಬರ್-2022ರ ಮಾಹೆಗೆ ಬಳಸಿಕೊಳ್ಳುವ ಸಂಬಂಧ ಹಾಗೂ ನವೆಂಬರ್-2022ರ ಮಾಹೆಗೆ ಅವಶ್ಯಕವಾಗಿ ಬೇಕಾಗಿರುವ ವ್ಯತ್ಯಾಸದ ಗೌರವಧನದ ಮಾಹಿತಿ ಹಾಗೂ ಹಿಂದಿನ ಸಾಲಿನ ಮಾಹೆಗಳಿಗೆ ಗೌರವಧನಕ್ಕಾಗಿ ಪದೇ ಪದೇ ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಕಾಲೇಜಿನ ಪ್ರಾಂಶುಪಾಲರುಗಳು ವ್ಯಯಕ್ತಿಕ ಗಮನಹರಿಸಿ ಸದರಿ ಸಾಲಿನ ಮಾಹೆಗೆ ಕೊರತೆಯಾಗಿರುವ ಗೌರವಧನಕ್ಕಾಗಿ ಅನುದಾನದ ಮಾಹಿತಿಯನ್ನು ಈ ಕೆಳಕಂಡ Excel Formatನಲ್ಲಿ ಸಾಫ್ಟ್‌ಕಾಪಿಯನ್ನು ಇ-ಮೇಲ್ ವಿಳಾಸ: dcegfbudget@gmail.comಕ್ಕೆ ದಿನಾಂಕ:24.11.2022ರೊಳಗೆ ಕಳುಹಿಸಿಕೊಡಲು ಸೂಚಿಸಿದೆ. ಕೊರತೆಯಾಗಿರುವ ಗೌರವಧನದ ಮಾಹಿತಿಯನ್ನು ಸಲ್ಲಿಸುವ ಸಂಬಂಧ ನಿಗಧಿತ ಅವಧಿಯ ನಂತರ ಬರುವ ಪ್ರಸ್ತಾವನೆಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಗೌರವಧನವನ್ನು ವಿತರಿಸುವ ಸಂಬಂಧ ವಿಳಂಬವಾದಲ್ಲಿ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂಬ ಮಾಹಿತಿಯನ್ನು ಈ ಮೂಲಕ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

**ನಮೂನೆ: ಪ್ರಾಂಶುಪಾಲರ ಹೆಸರು ಮತ್ತು ಮೊಬೈಲ್ ಸಂಖ್ಯೆ:**

| ಕ್ರ.ಸಂ | ಕಾಲೇಜಿನ ಹೆಸರು | ಸದರಿ ಸಾಲಿನಲ್ಲಿ ಕೊರತೆಯಾಗಿರುವ ಮಾಹೆಗೆ ಅವಶ್ಯಕವಾಗಿರುವ ಒಟ್ಟು ಅನುದಾನ | ಪ್ರಾಂಶುಪಾಲರ ಹಂತದಲ್ಲಿ ಉಳಿಕೆಯಾಗಿರುವ ಒಟ್ಟು ಅನುದಾನ | ಕೊರತೆಯಾಗಿರುವ ಮಾಹೆಗಳಿಗೆ ಅವಶ್ಯಕವಾಗಿ ಬೇಕಾಗಿರುವ ಒಟ್ಟು ಅನುದಾನ | ನವೆಂಬರ್-2022ರ ಮಾಹಗೆ ಅವಶ್ಯಕವಾಗಿ ಬೇಕಾಗಿರುವ ಅನುದಾನ | ಒಟ್ಟು ಅನುದಾನ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ-2021-22ನೇ ಸಾಲಿಗೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಅನುಮೋದನೆಯನ್ನು ನೀಡುವ ಸಂಬಂಧ ಕಾಲೇಜುಗಳಿಂದ ಮಾಹಿತಿಯನ್ನು ಪಡೆದು ಅನುಮೋದನೆಯನ್ನು ನೀಡುವ ಸಂಬಂಧ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಗಿದೆ..
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್ ಅಳವಡಿಸಲು ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.